ಶ್ರೀ ಭೈರೇಗೌಡ: ಮಾನ್ಯ ಭಾರಿ ನೀರಾವರಿ ಸಚಿವರು ಹೇಳಿರತಕ್ಕಂಥಾದ್ದು ಸರಕಾರದ ಸ್ಟೇಟ್‌ಮೆಂಟ್ ಆಗುತ್ತದೆಯೇ?

ಶ್ರೀ ಎಸ್.ಎಂ.ಕೃಷ್ಣ: ನೀವು ನಾವು ಒಟ್ಟಿಗೆ ಸೇರಿ ಏನು ಸ್ಟೇಟ್‌ಮೆಂಟ್ ಮಾಡಬೇಕೋ ಅದನ್ನು ಮಾಡೋಣ. ಆ ಮೇಲೆ, ಅದು ಸರಕಾರದ ಸ್ಟೇಟ್‌ಮೆಂಟ್ ಆಗುತ್ತದೆ.

4. ಗಮನ ಸೆಳೆಯುವ ಸೂಚನೆ

ಬೆಂಗಳೂರು ನಗರದಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಯ ನಿಷೇಧ.

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ): ಸನ್ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ನಿಷೇಧಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು): ಬೆಂಗಳೂರು ನಗರದಲ್ಲಿ ಪ್ರಮುಖವಾಗಿ ಜನರು ಪ್ಲಾಸ್ಟಿಕ್ ಚೀಲಗಳನ್ನು ಹೆಚ್ಚು ಹೆಚ್ಚಾಗಿ ದಿನೇ ದಿನೇ ಉಪಯೋಗಿಸುತ್ತಿರುವುದರಿಂದ ಹಾಗೂ ಈ ಚೀಲಗಳನ್ನು ನಗರಪಾಲಿಕೆಯ ಕಸದ ವಿಲೇವಾರಿ ಮತ್ತು ಶೇಖರಣೆ ಸಲುವಾಗಿ ಇಟ್ಟಿರುವ ತೊಟ್ಟಿಗಳಿಗೆ ಸರಿಯಾಗಿ ಹಾಕದೆ ಇರುವುದರಿಂದ ಆ ಚೀಲಗಳು ಚರಂಡಿ ಸೇರಿ ಮಳೆ ನೀರು ಸರಿಯಾಗಿ ಹರಿಯದೆ ಒಳಚರಂಡಿಗಳು ಕಟ್ಟಿಕೊಳ್ಳುತ್ತಿದ್ದು, ಕಾಲಕಾಲಕ್ಕೆ ಇವುಗಳನ್ನು ತೆಗೆಯಲು ಕ್ರಮ ವಹಿಸಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಸವನ್ನು ಆಯಾ ದಿನವೇ ಸಾಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ, ಉತ್ಪತ್ತಿಯಾದ ಕಸಕ್ಕೆ ಬೆಂಕಿ ಇಡದಂತೆ ಸೂಕ್ತ ನಿಗಾ ಇಡುವಂತೆ ಆಯಾ ಬಡಾವಣೆಯಲ್ಲಿನ ನಗರಪಾಲಿಕೆಯ ಸಿಬ್ಬಂದಿಗೆ ತಿಳಿಸಲಾಗಿದೆ ಮತ್ತು ಈ ಬಗ್ಗೆ ತಪಾಸಣೆಯನ್ನು ಸಹ ನಡೆಸಲಾಗುತ್ತಿದೆ.

ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ನಿಷೇಧಿಸುವ ಅಥವಾ ಮುಂದುವರಿಸಿಕೊಂಡು ಹೋಗುವ ಬಗ್ಗೆ ಸಾಧಕ ಭಾಧಕಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಕಾನೂನಿನಡಿಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ದಿನೇಶ್ ಗುಂಡುರಾವ್: ಮಾನ್ಯ ಅಧ್ಯಕ್ಷರೇ, ಕೇಂದ್ರದಲ್ಲಿ ಈ ಕುರಿತು ಒಂದು ಕಾನೂನು ಇದೆ. ಪುನರ್ ಬಳಕೆಯ ಪ್ಲಾಸ್ಟಿಕ್‌ನ್ನು ಉಪಯೋಗಿಸಬಾರದು, ಅದರಿಂದ ಆಗತಕ್ಕಂಥ ದುಷ್ಪರಿಣಾಮಗಳು ಅದರಲ್ಲೂ ವಿಶೇಷವಾಗಿ ಆಹಾರಪದಾರ್ಥಗಳು

ಮತ್ತು ಸಿದ್ಧ ಆಹಾರಪದಾರ್ಥಗಳು ಮುಂತಾದವುಗಳ ಬಗ್ಗೆ ನಾವು ವಿಶೇಷವಾಗಿ ಯೋಚನೆ ಮಾಡಬೇಕಾಗುತ್ತದೆ. ಪುನರ್‌ಬಳಕೆಯ ಪ್ಲಾಸ್ಟಿಕ್‌ನಿಂದ ಜನರ ಆರೋಗ್ಯದ ಮೇಲೆ ಆಹಾರ ಪದಾರ್ಥಗಳ ಮುಖಾಂತರ ಬಹಳಷ್ಟು ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಪುನರ್ ಬಳಕೆಯ ಪ್ಲಾಸ್ಟಿಕ್‌ನ್ನು ಉಪಯೋಗಿಸದೇ ಇರುವುದರ ಜೊತೆಗೆ ಆಹಾರಪದಾರ್ಥಗಳೊಂದಿಗೆ ಉಪಯೋಗಿಸುವ ಪ್ಲಾಸ್ಟಿಕ್ ಬಳಕೆಯನ್ನೇ ಸರಕಾರದವರು ನಿಷೇಧಿಸಬೇಕಾಗುತ್ತದೆ. ಆಹಾರ ಪದಾರ್ಥಗಳ ಬಳಕೆಯಲ್ಲಿ ಪುನರ್ ಬಳಕೆಯ ಅಥವಾ ಹೊಸ ಪ್ಲಾಸ್ಟಿಕ್‌ನ್ನು ಏನು ಉಪಯೋಗ ಮಾಡುತ್ತಾರೆ ಅದನ್ನು ನಿಯಂತ್ರಣ ಮಾಡತಕ್ಕಂಥಾದ್ದು ಒಂದು ಸಮಸ್ಯೆಯಾಗುತ್ತದೆ. ಪ್ಲಾಸ್ಟಿಕ್‌ನ್ನು ಉಪಯೋಗಿಸಬೇಕಾಗಿ ಬಂದಾಗ ಇದು ಹೊಸದೇ, ಪುನರ್ ಬಳಕೆಯದೇ ಎಂದು ನೋಡಲು ಬಹಳ ಯೋಚನೆ ಮಾಡಬೇಕಾಗುತ್ತದ. ಬೆಂಗಳೂರು ನಗರದಲ್ಲಿ ವಿಶೇಷತಃ ಕಲ್ಯಾಣ ಮಂಟಪಗಳಲ್ಲಿ ಮತ್ತು ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಏನು ಪ್ಲಾಸ್ಟಿಕ್ ಉಪಯೋಗ ಮಾಡುತ್ತಾರೆ ಅದನ್ನು ನಾವು ಅವಲೋಕಿಸಬೇಕು. ಸಮಾರಂಭಗಳಲ್ಲಿ ಟೇಬಲ್‌ಗಳ ಮೇಲೆ ಪ್ಲಾಸ್ಟಿಟಕ್ ಹಾಳೆಗಳನ್ನು ಹಾಕುತ್ತಾರೆ. ಅದರ ಮೇಲೆ ಬಾಳೆ ಎಲೆಗಳನ್ನು ಹಾಕಿ ಊಟ ಮಾಡುತ್ತಾರೆ. ಊಟವಾದ ನಂತರ ಅದರ ವಿಲೇವಾರಿ ಸಂದರ್ಭಗಳಲ್ಲಿ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವುದಿಲ್ಲ. ಹಾಗಾಗಿ ಚರಂಡಿಗಳಲ್ಲಿ, ಒಳಚರಂಡಿಗಳಲ್ಲಿ ಸೇರಿಕೊಂಡು ಅಲ್ಲಿ ನೀರು ಬ್ಲಾಕ್ ಆಗಿ ಚರಂಡಿಗಳ ನೀರು ಹೊರಗೆ ಬಂದು ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಾ ಇದೆ. ಇದರ ಬಗ್ಗೆಯೂ ಸರಕಾರದವರು ಬಹಳಷ್ಟು ಆಲೋಚನೆ ಮಾಡಬೇಕಾಗುತ್ತದೆ. ಈ ಪ್ಲಾಸ್ಟಿಕ್ ಚೀಲಗಳ ಬರ್ನಿಂಗ್ ನಿಂದಾಗಿ ಯಾವ ಡಯಾಕ್ಸಿನ್ ಎಂಬ ಹೊಗೆ ಬರುತ್ತದೆ ಅದು ಆಹಾರಗಳ ಮೂಲಕ ಜನರ ಆರೋಗದ್ಯ ಮೇಲೆ ಬಹಳಷ್ಟು ಪರಿಣಾಮ ಆಗುತ್ತದೆ. ಒಟ್ಟಿನಲ್ಲಿ ಈ ಪ್ಲಾಸ್ಟಿಕ್ ಚೀಲಗಳ ಉಪಯೋಗದಿಂದ ಒಳ್ಳೆಯದರ ಜೊತೆಗೆ ಬಹಳಷ್ಟ ಹಾನಿ ಕೂಡ ಆಗುತ್ತಿದೆ. ಆದ್ದರಿಂದ ಈ ವಿಚಾರದ ಬಗ್ಗೆ ಸರಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಸಾರ್ವಜನಿಕರಿಗೂ ಬಹಳಷ್ಟು ಸಮಸ್ಯೆಗಳು ಉದ್ಭವವಾಗುತ್ತಿದೆ. ಆದ್ದರಿಂದ ಸರಕಾರದವರು ಇದರ ಬಗ್ಗೆ ಕ್ರಮ ಜರುಗಿಸಬೇಕಾಗುತ್ತದೆ. ಪುನರ್ ಬಳಕೆಯ ಮತ್ತು ಹೊಸ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಕೆಲಸವನ್ನು ಸರಕಾರ ಮಾಡಬೇಕಾಗುತ್ತದೆ ಪ್ಲಾಸ್ಟಿಕ್ ಬಳಕೆಯು ಆಹಾರ ಪದಾರ್ಥಗಳ ಜೊತೆಗೆ ಬಳಕೆಯಾಗುವ ವಿಚಾರದಲ್ಲಿ ಗಮನಹರಿಸಬೇಕು. ಇದರ ಬಳಕೆಯ ಬದಲು ವ್ಯವಸ್ಥೆಯಾಗಿ ಏನು ಮಾಡಬೇಕೆಂಬುದರ ಬಗ್ಗೆಯೂ ಸರಕಾರದವರು ವಿಚಾರ ಮಾಡಬೇಕಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳವರು): ಪ್ಲಾಸ್ಟಿಕ್ ವಿಷಾಂತರ ಬಹಳ ಜಾಸ್ತಿಯಾಗಿದೆ ಎನ್ನುವಂತಾದ್ದು ಮಾನ್ಯ ಸದಸ್ಯರ ಮೂಲಭೂತವಾದ ಆತಂಕವಾಗಿದ್ದು

ಅದರಲ್ಲಿ ನಾವೆಲ್ಲರೂ ಕೂಡ ಭಾಗಿಗಳಾಗಿದ್ದೇವೆ. ಕೇಂದ್ರ ಸರಕಾರದವರು ಈಗಾಗಲೇ ಇದರ ಬಗ್ಗೆ ನಿಷೇಧವನ್ನು ಜಾರಿಗೆ ತಂದಿದ್ದಾರೆ. ನಾವು ಕೂಡ ಈ ನಿಷೇಧವನ್ನು ಜಾರಿಗೆ ತರಲಿಕ್ಕೆ ಹೇಗೆ ಸಾಧ್ಯವೆನ್ನುವುದನ್ನು ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳ ಹಿನ್ನೆಲೆಯಲ್ಲಿ ಇದರ ಬಗ್ಗೆ ವಿಚಾರ ಮಾಡುತ್ತೇವೆ. ಮತ್ತು ಈಗಿರತಕ್ಕಂಥ ಕೆಲವು ಕಾನೂನುಗಳ ಚೌಕಟ್ಟಿನಲ್ಲಿಯೇ ಕೆಲವೊಂದು ನಿಷೇಧಗಳನ್ನು ಈ ರೀ-ಸೈಕಲಿಂಗ್ ಆಫ್ ಪ್ಲಾಸ್ಟಿಕ್ ಬ್ಯಾಗ್‌ಗಳ ವಿಚಾರದಲ್ಲಿ ನಾವು ಹಾಕಬಹುದಾಗಿದೆ. ಈ ಪ್ಲಾಸ್ಟಿಕ್‌ನ್ನು ಬ್ಯಾನ್ ಮಾಡತಕ್ಕಂಥಾದ್ದು, environment-friendly measure ಎನ್ನತಕ್ಕಂಥಾದ್ದು ಇತ್ತೀಚಿನ ಒಂದು ಚಿಂತನೆಯಾಗಿದೆ. ಅದರಲ್ಲಿಯೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇದರ ಹಾವಳಿ ಜಾಸ್ತಿಯಾಗಿರುವುದರಿಂದ ಇದರ ಬಗ್ಗೆ ಅರ್ಥಪೂರ್ಣವಾದ ನಿಯಂತ್ರಣ ಬಹಳ ಅವಶ್ಯಕತೆ ಇದೆ ಎಂಬುದನ್ನು ಸರಕಾರ ಗಮನಿಸಿದೆ. ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಮತ್ತು ಕಂಟೈನರ್ಸ್‌ಗಳನ್ನು ಹೇಗೆ ಕಂಟ್ರೋಲ್ ಮಾಡಬೇಕೆಂಬ ಬಗ್ಗೆ ನಾವು ಯೋಚನೆ ಮಾಡಿ ಅನಂತರ ಈ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ನಮ್ಮ ವಿಧಾನಸಭೆಯ ಲಾಂಜಿನಲ್ಲೇ ಪ್ಲಾಸ್ಟಿಕ್ ಲೋಟಗಳಿವೆ. ನಾವು ಸದಸ್ಯರುಗಳು ಅದರಲ್ಲಿಯೇ ನೀರನ್ನು ಕುಡಿಯುತ್ತಿದ್ದೇವೆ. ಅದರ ಬದಲಿಗೆ ಮೆಟಲ್ ಲೋಟಗಳನ್ನು ಇಡುವ ವ್ಯವಸ್ಥೆ ಮಾಡಬೇಕು. ಇದು ಇಲ್ಲಿಂದಲೇ ಪ್ರಾರಂಭವಾಗಲಿ. ಪ್ಲಾಸ್ಟಿಕ್‌ನ್ನು ನಿಲ್ಲಿಸುವ ಬಗ್ಗೆ ನಾವು ಅದನ್ನು ಇಲ್ಲಿಂದಲೇ ಶುರುಮಾಡೋಣ.

ಅಧ್ಯಕ್ಷರು: ಇದನ್ನು ನಾನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ. ಈಗ 2000-2001 ನೇ ಸಾಲಿನ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಉತ್ತರ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ನಿನ್ನೆ ದಿನ ಕುಡಿಯುವ ನೀರಿನ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ. ಇಮ್ಮಿಡಿಯೇಟ್ ಆಗಿ ಸರ್ಕಾರ ರೀ-ಆ್ಯಕ್ಟ್ ಮಾಡಬೇಕು. ಎಲ್ಲಾ ಕಡೆ ನೀರಿನ ತೊಂದರೆಯಾಗಿದೆ. ನಾವು ಮಾಡಿದ ಚರ್ಚೆಗೆ ಸದನದಲ್ಲಿ ಉತ್ತರವೇ ಇಲ್ಲವೆಂದರೆ ಅರ್ಥವೇನು? ತಕ್ಷಣವೇ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದರ ಬಗ್ಗೆ ಏನು ಮಾಡುತ್ತಾರೆಂದು ಹೇಳಬೇಕು. ಅದರ ನಂತರ ತಾವು ಮುಂದೆ ಹೋಗಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಬೇಡಿಕೆಗಳನ್ನು ಮಧ್ಯಾಹ್ನ ತೆಗೆದುಕೊಳ್ಳೋಣ. ತಮ್ಮಲ್ಲಿ ನನ್ನ ಮನವಿ ಏನೆಂದರೆ ಬಹಳಷ್ಟು ಜನ ಸದಸ್ಯರುಗಳು ಅವರವರ ಕ್ಷೇತ್ರ, ಅವರ ತಾಲ್ಲೂಕು, ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳಿದ್ದಾರೆ. ಅದಕ್ಕೆ ಉತ್ತರ ಕೊಟ್ಟ ನಂತರ ತಾವು ಮುಂದಿನ ವಿಷಯವನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು: ಮಾನ್ಯ ಫೋರ್ಡೆಯವರೇ, ನಿನ್ನೆ ಕುಡಿಯುವ ನೀರಿನ ಬಗ್ಗೆ

ಚರ್ಚೆಯಾಗಿದೆ. ಅದಕ್ಕೆ ತಾವು ಉತ್ತರ ಕೊಟ್ಟುಬಿಟ್ಟರೆ ಆ ಸಬ್ಜೆಕ್ಟ್ ಅಲ್ಲಿಗೆ ಮುಗಿದು ಹೋಗುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ: ನಾನು ಶೂನ್ಯವೇಳೆಯಲ್ಲಿ ಒಂದು ವಿಷಯದ ಬಗ್ಗೆ ಕೇಳಿದ್ದೆ.

ಅಧ್ಯಕ್ಷರು: ಇವತ್ತು ಶೂನ್ಯವೇಳೆಗೆ ಆಲಮಟ್ಟಿ ವಿಷಯವನ್ನು ಅಲೊ ಮಾಡಿದ್ದೇನೆ. ಮೂರು-ನಾಲ್ಕು ವಿಷಯಗಳನ್ನು ಒಂದೇ ದಿವಸ ತೆಗೆದುಕೊಳ್ಳುವುದು ಬೇಡ. ಇನ್ನೊಂದು ದಿವಸ ಮಾಡೋಣ. ಆಲಮಟ್ಟಿ ವಿಷಯವನ್ನು ಶೂನ್ಯವೇಳೆಯಲ್ಲಿ ಎತ್ತಿರುವುದು ತಾನೇ. ಅದು ಬಹಳ ಮುಖ್ಯವಾದ ವಿಷಯ ತಾನೇ. ಎಷ್ಟು ಸಬ್ಜೆಕ್ಟ್‌ಗಳನ್ನು ಶೂನ್ಯವೇಳೆಯಲ್ಲಿ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆಕ್ಚುಯಲ್ ಆಗಿ ಶೂನ್ಯ ವೇಳೇನೆ ಇಲ್ಲ. ನಿಯಮ 351ರ ಪ್ರಕಾರ ಅಲೊ ಮಾಡಿದಾಗ ನೀವು ರೈಸ್ ಮಾಡಬಹುದು ಏನಹಃ ಅದಕ್ಕೆ ನೀವು ಉತ್ತರವನ್ನು ನಿರೀಕ್ಷಿಸಬಾರದು.

ಶ್ರೀ ಕೆ. ಶ್ರೀನಿವಾಸಗೌಡ: ಒಂದು ಅವ್ಯವಹಾರದ ಬಗ್ಗೆ ಶೂನ್ಯವೇಳೆಯಲ್ಲಿ ಮಾತನಾಡಬೇಕಾಗಿತ್ತು.

ಶ್ರೀ ಬಿ.ಸೋಮಶೇಖರ್: ನಾಳೆ ತೆಗೆದುಕೊಳ್ಳುತ್ತೇವೆಂದಾದರೂ ಹೇಳಿಬಿಡಿ.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ ಬಿಡಿ. ಮಾನ್ಯ ಫೋರ್ಪಡೆಯವರೇ, ತಾವು ಉತ್ತರ ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚೆ ತಾವು ಬಹಳ ದೀರ್ಘವಾಗಿ ರಾಜ್ಯದ ಕುಡಿಯುವ ನೀರಿನ ಸಮಸ್ಯೆ ಬಗ್ಗ ಪ್ರಸ್ತಾಪ ಮಾಡಲಿಕ್ಕೆ ಅದರಲ್ಲೂ ವಿಶೇಷವಾಗಿ ಹೊಸದಾಗಿ ಈಗ ಗೆದ್ದು ಬಂದಿರುವ ಸದಸ್ಯರುಗಳಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಇದು ಬಹಳ ಸಂತೋಷದ ವಿಚಾರ. ತಮಗೆ ಧನ್ಯವಾದಗಳು. ಬಹಳ ದೀರ್ಘವಾಗಿ ಸುಮಾರು ಮೂರು-ಮೂರುವರೆ ಗಂಟೆಗಳ ಕಾಲ ಚರ್ಚೆಯಾಗಿದೆ. ಮಾನ್ಯಮಂತ್ರಿಗಳಲ್ಲಿ ನನ್ನದು ಒಂದು ಸಲಹೆ ಏನೆಂದರೆ ಎಲ್ಲೆಲ್ಲಿ ನಾವು ಮಿನಿ ವಾಟರ್ ಸ್ಕೀಮ್‌ಗಳನ್ನು ಮಾಡಿದ್ದೇವೆ, ಅಥವಾ ಎ.ಆರ್.ಡಬ್ಲ್ಯೂ.ಎಸ್.ನಲ್ಲಿ ಟ್ಯಾಂಕ್‌ಗಳನ್ನು ಏನು ಕಟ್ಟಿದ್ದೇವೆ, ಈ ಎರಡೂ ಕಡೆಗಳಲ್ಲೂ ಸಹಿತ ಷಾರ್ಟೇಜ್ ಆಫ್ ವಾಟರ್ ಇದೆ. ಈಗ ಇರುವ ನಾರ್ಮ್ಸ್‌ಗಳ ಪ್ರಕಾರವಾಗಿ ಎರಡು ಸಿಸ್ಟನ್ನು ಅಥವಾ ಮೂರು ಸಿಸ್ಟನ್ನು ಹೆಚ್ಚು ಮಾಡಬೇಕು. ಅಥವಾ ಅದೇ ಸಿಸ್ಟನ್‌ಗೆ ಅದೇ ಪೈಪ್‌ಗಳಿಗೆ ಇನ್ನೊಂದು ಬೋರ್‌ವೆಲ್‌ನ್ನು ಹಾಕಿ ಅದಕ್ಕೆ ಇನ್ನೊಂದು ಮೋಟಾರನ್ನು ಕೂಡಿಸಿ ಸ್ವಲ್ಪ ನೀರನ್ನು ಹೆಚ್ಚು ಮಾಡಬೇಕು ಎಂದು ಹೇಳಿದರೆ ಅದಕ್ಕೆ ಪ್ರಾವಿಷನ್ ಈಗ ಇದ್ದಂತೆ ಇಲ್ಲ. ಆದಕ್ಕೆ ದಯಮಾಡಿ ಅವಕಾಶ

ಕಲ್ಪಿಸಿಕೊಡಬೇಕೆಂದು ನನ್ನದು ಮನವಿ. ಎರಡನೆಯದಾಗಿ ಏನೆಂದರೆ ಈಗ ವಾಟರ್ ಟ್ಯಾಂಕ್‌ಗಳನ್ನು ನಾವು ಕಟ್ಟಿದ್ದೇವಲ್ಲ, ಅಲ್ಲಿ ಕೆಲವು ಕಡೆಗಳಲ್ಲಿ ಸೋರ್ಸ್‌ಗಳು ಡ್ರೈ ಆಗಿವೆ. ಅಲ್ಲಿ ಬರೀ ವಾಟರ್ ಟ್ಯಾಂಕ್‌ಗಳು ಇದೆಯೇ ಹೊರತು ಅಲ್ಲಿ ನೀರಿಲ್ಲ. ಈಗ ಇರುವ ಪಾಪ್ಯುಲೇಷನ್ ಗೈಡ್‌ಲೈನ್ ಪ್ರಕಾರವಾಗಿ ಹೋದರೆ ನಾವು ಮಾಡುವುದು ಕಷ್ಟವಾಗುತ್ತದೆ. ನಾವು ಜಿಲ್ಲಾಪಂಚಾಯಿತಿ ಚೀಫ್ ಎಕ್ಸಿಕ್ಯುಟೀವ್ ಆಫೀಸರ್‌ಗಳಿಗೆ ಹೇಳಿದ್ದೇವೆ. ಅದಕ್ಕೇನು ಅವರು ಹೇಳುತ್ತಾರೆಂದರೆ ಇದಕ್ಕೆ ಪ್ರಾವಿಷನ್ ಇಲ್ಲ ಎಂದು ಹೇಳುತ್ತಾರೆ. ದಯಮಾಡಿ ಇದರ ಬಗ್ಗೆ ಸ್ಪಷ್ಟವಾದ ಒಂದು ಸೂಚನೆ ಕೊಡಿ. ತಾವೇನು ಈಗ ಹೆಚ್ಚಿಗೆ ನೀರನ್ನು ಒದಗಿಸುವ ಬಗ್ಗೆ ಹೇಳಿದ್ದೀರಿ, ಆಗಮೆಂಟೇಷನ್ ಆಫ್ ದಿ ಮಿನಿವಾಟರ್ ಸ್ಕೀಮ್‌ಗಳು, ಅಥವಾ ಆಗಾಗ್ಗೆ ಕೆಟ್ಟುಹೋಗುವಂಥದ್ದು, ಇಂಥದ್ದಕ್ಕೆ ತಾವು ಪ್ರತಿಯೊಂದು ತಾಲ್ಲೂಕಿಗೂ ಸಹಿತ 10 ರಿಂದ 15 ಲಕ್ಷ ರೂಪಾಯಿಗಳ ಪ್ರಾವಿಷನ್ಸ್‌ನ್ನು ಅಲ್ಲಿನ ಸಿ.ಇ.ಓ.ಗೆ ಕೊಟ್ಟರೆ ಇನ್‌ಟರ್ನ್ ಅವರು ಎಕ್ಸಿಕ್ಯುಟೀವ್ ಇಂಜಿನಿಯಲ್ ಎಇಇ ಮೂಲಕ ಮಾಡಿಸಿಕೊಳ್ಳಬಹುದು ಎನ್ನುವ ಸಲಹೆಯನ್ನು ನಾನು ಮಾನ್ಯ ಮಂತ್ರಿಗಳಿಗೆ ಕೊಡುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ್: ಒಂದೇ ಒಂದು ಸಲಹೆ. ನಿನ್ನೆ ನಾನು ಮರೆತೆ. ಏನು ವಾಟರ್ ಸಪ್ಲೈ ಸ್ಕೀಮ್‌ಗಳು ಇದೆ, ಅಲ್ಲಿ ಮೋಟಾರುಗಳು ಕೆಟ್ಟುಹೋದರೆ ಅದರ ರಿಪೇರಿಗಾಗಿ ಸುಮಾರು ಎಂಟುದಿವಸ, ಹತ್ತುದಿವಸ, ಒಂದು ತಿಂಗಳಗಟ್ಟಲೇ ಆಗುತ್ತದೆ. ಅಲ್ಲಿಯತನಕ ಅಲ್ಲಿ ಕುಡಿಯುವ ನೀರು ಸಿಕ್ಕುವುದಿಲ್ಲ. ಮಹಾರಾಷ್ಟ್ರದಲ್ಲಿ ಒಂದು ಯೋಜನೆ ಇದೆ ಎಂದು ನಾನು ಕೇಳಿದ್ದೇನೆ.

ಒಂದೊಂದು ಸ್ಕೀಮ್‌ಗೆ ಎರಡೆರಡು ಮೋಟಾರುಗಳನ್ನು ಅಳವಡಿಸತಕ್ಕದ್ದು. ಒಂದು ಕೆಟ್ಟಹೋದರೆ ಅದನ್ನು ರಿಪೇರಿ ಮಾಡುವತನಕ ಇನ್ನೊಂದು ಅಲ್ಲಿ ಕೆಲಸ ಮಾಡುತ್ತಿರುತ್ತೆ. ಪ್ರಾಜೆಕ್ಟ್ ಮಾಡುವಾಗಲೇ ಅದನ್ನು ಒಂದು ಕಾಂಪೊನೆಂಟ್ ಆಗಿ ಸೇರಿಸಿಕೊಂಡು ಪ್ರಾಜೆಕ್ಟ್‌ನ್ನು ತಯಾರು ಮಾಡುತ್ತಾರೆ. ಇದು ಮಹಾರಾಷ್ಟ್ರದಲ್ಲಿದೆ ಎಂದು ಕೇಳಿದ್ದೇನೆ. ಅದನ್ನು ತಾವೇನಾದರೂ ಮಾಡುವುದಾದರೆ ಒಳ್ಳೆಯದು. ಗ್ಯಾಸ್ ಸಿಲಿಂಡರ್‌ಗಳನ್ನು ಎರಡು ಇಟ್ಟುಕೊಳ್ಳುತ್ತಾರಲ್ಲ, ಒಂದು ಎಕ್ಸಾಸ್ಟ್ ಆದಾಗ ಇನ್ನೊಂದನ್ನು ಉಪಯೋಗಿಸುವ ಹಾಗೆ. ಅದೇ ರೀತಿ ಮೋಟಾರನ್ನು ಸಹಾ ಎಕ್ಸ್‌ಟ್ರಾ ಇಟ್ಟುಕೊಂಡರೆ ಒಂದು ಕೆಟ್ಟುಹೋದರೂ ಇನ್ನೊಂದು ಕೆಲಸ ಮಾಡುತ್ತದೆ ಎಂದು ನನ್ನ ಸಲಹೆ. ಇದರ ಬಗ್ಗೆಯೂ ಮಂತ್ರಿಗಳು ಉತ್ತರ ಹೇಳಬೇಕೆಂದು ಮನವಿ.